RNU AIR DHARWAD

**OCTOBER 02, 2024**

## ALL INDIA RADIO- DHARWAD

## PRADESH SAMACHARA (KANNADA) 7:05 AM

**ಮುಖ್ಯಾಂಶಗಳು**

- **ರಾಷ್ಟ್ರಪಿತ ಗಾಂಧೀಜಿ ಹಾಗೂ ಲಾಲ್ ಬಹಾದ್ದೂರ್ ಶಾಸ್ತ್ರೀಜಿ ಅವರ ಜಯಂತ್ಯುತ್ಸವ: ನಾಡಿನಾದ್ಯಂತ ಇಂದು ಶ್ರದ್ಧಾ ಸುಮನ ಅರ್ಪಣೆ.**
- **ಮಹಾತ್ಮ ಗಾಂಧೀಜಿ ಅವರ 155ನೇ ಜಯಂತಿ; ಮುಖ್ಯಮಂತ್ರಿ ಅವರಿಂದ ಇಂದು ಸಾಧಕರಿಗೆ ಪ್ರತಿಷ್ಠಿತ ಪುರಸ್ಕಾರಗಳ ಪ್ರದಾನ.**
- **ಹಿರಿಯ ನಾಗರಿಕರ ಮಾಸಾಶನದ ಮೊತ್ತ ಹೆಚ್ಚಿಸಲು ಕ್ರಮ – ಮುಖ್ಯಮಂತ್ರಿ ಸಿದ್ದರಾಮಯ್ಯ**
- **'ಸಹಬಾಳ್ವೆಯೊಂದಿಗೆ ವನ್ಯಜೀವಿಗಳ ಸಂರಕ್ಷಣೆ' ಧ್ಯೇಯದಡಿ, ಇಂದಿನಿಂದ 70ನೇ ವನ್ಯಜೀವಿ ಸಪ್ತಾಹ.**

**ಈಗ ವಾರ್ತೆಗಳ ವಿವರ**

**ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಅವರ, 155ನೇ ಮತ್ತು ಸ್ವತಂತ್ರ ಭಾರತದ 2ನೇ** ಪ್ರಧಾನಮಂತ್ರಿ ಲಾಲ್ ಬಹಾದ್ದೂರ್ ಶಾಸ್ತ್ರಿಯವರ 120ನೇ ಜಯಂತ್ಯುತ್ಸವವನ್ನು ಇಂದು ನಾಡಿನಾದ್ಯಂತ ಶ್ರದ್ಧೆಯಿಂದ ಆಚರಿಸಲಾಗುತ್ತಿದೆ.ಮಹಾತ್ಮ ಗಾಂಧಿಯವರ ಜನ್ಮದಿನವನ್ನು 'ಅಂತಾರಾಷ್ಟ್ರೀಯ ಅಹಿಂಸಾ ದಿನವನ್ನಾಗಿ' ಆಚರಿಸಲಾಗುತ್ತದೆ. ಸರಳ ಜೀವನ ಮತ್ತು ಅಹಿಂಸಾ ಮಾರ್ಗಿಯಾಗಿ, ಸತ್ಯಾಗ್ರಹದ ಮೂಲಕ ಮಹಾತ್ಮ ಗಾಂಧೀಜಿ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟರು. ಈ ದಿನವು ಶಿಕ್ಷಣ ಮತ್ತು ಸಾರ್ವಜನಿಕ ಜಾಗ್ರತಿಯ ಮೂಲಕ ಅಹಿಂಸೆಯ ಸಂದೇಶವನ್ನು ಹರಡಲು ಮತ್ತು ಶಾಂತಿ, ಸಹನೆ, ತಿಳಿವಳಿಕೆ ಹಾಗೂ ಮಾನವ ಬಂಧುತ್ವದ ಆಶಯವನ್ನು ಪುನರುಚ್ಚರಿಸುವ ದಿನವಾಗಿದೆ.

**ಲಾಲ್ ಬಹಾದ್ದೂರ್ ಶಾಸ್ತ್ರಿ ಅವರ ಸರಳತೆ, ದೇಶಕ್ಕಾಗಿ ಸಮರ್ಪಣೆ ಮತ್ತು** 'ಜೈ ಜವಾನ್, ಜೈ ಕಿಸಾನ್' ಘೋ ಣೆ ಇಂದಿಗೂ ಪ್ರತಿಧ್ವನಿಸುತ್ತಿದೆ. ಯುವ ಪೀಳಿಗೆಗೆ ಅವರ ಜೀವನಾದರ್ಶ ಸ್ಫೂರ್ತಿದಾಯಕ. ಲಾಲ್ ಬಹಾದ್ದೂರ್ ಶಾಸ್ತ್ರಿ ಅವರು, ಪ್ರಧಾನಮಂತ್ರಿಯಾಗಿದ್ದರೂ ತಮ್ಮ ಸರಳ, ಸಜ್ಜನಿಕೆಯಿಂದ ಉದಾತ್ತ ಧ್ಯೇಯಗಳೊಂದಿಗೆ ಅಂದು ದೇಶ ಎದುರಿಸುತ್ತಿದ್ದ ಕಡುಬಡತನ, ಆಹಾರ ಸಮಸ್ಯೆ ಹಾಗೂ ಶಿಕ್ಷಣಕ್ಕೆ ಹೆಚ್ಚಿನ ಒತ್ತನ್ನು ನೀಡಿದಂತಹ ಮಹಾನ್ ವ್ಯಕ್ತಿ. ಲಾಲ್ ಬಹಾದ್ದೂರ್ ಶಾಸ್ತ್ರಿ ಅವರು, ಮಹಾತ್ಮ ಗಾಂಧೀಜಿ ಅವರ ರಾಜಕೀಯ ಚಿಂತನೆಗಳಿಂದ ಪ್ರಭಾವಿತರಾಗಿದ್ದರು. 'ಕಠಿಣ ಪರಿಶ್ರಮ ಪ್ರಾರ್ಥನೆಗೆ ಸಮನಾದುದು' ಎಂದು, ಅವರು ಭಾರತೀಯ ಶ್ರಮ ಸಂಸ್ಕೃತಿಯನ್ನು ಪ್ರತಿನಿಧಿಸಿದವರು.

**ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಆರಂಭಿಸಿರುವ 'ಸ್ವಚ್ಛ ಭಾರತ್ ದಿವಸ್'** ಅಭಿಯಾನಕ್ಕೆ ಹತ್ತು ವ ರ್ಷವಾದ ಹಿನ್ನೆಲೆ, ಇಂದು ನಡೆಯಲಿರುವ 155ನೇ ಗಾಂಧಿ ಜಯಂತಿ ನಿಮಿತ್ತ ಪ್ರಧಾನಮಂತ್ರಿಯವರು, ವಿಜ್ಞಾನ ಭವನದಲ್ಲಿ 9 ಸಾವಿರದ 600 ಕೋಟಿ ರೂಪಾಯಿಗೂ ಅಧಿಕ ಮೌಲ್ಯದ ನೈರ್ಮಲ್ಯ ಮತ್ತು ಸ್ವಚ್ಛತೆಗೆ ಸಂಬಂಧಿಸಿದ ಹಲವಾರು ಯೋಜನೆಗಳಿಗೆ ಚಾಲನೆ ಮತ್ತು ಶಿಲಾನ್ಯಾಸ ನೆರವೇರಿಸಲಿದ್ದಾರೆ.

ಮಹಾತ್ಮ ಗಾಂಧಿಜೀಯವರ 155ನೇ ಜನ್ಮ ದಿನಾಚರಣೆಯ ಅಂಗವಾಗಿ ಇಂದು **"ಸ್ವಚ್ಛತಾ ಆಂದೋಲನ ಪ್ರತಿಜ್ಞಾ ವಿಧಿ"** ಕಾರ್ಯಕ್ರಮದ ಭಾಗವಾಗಿ ಬೆಂಗಳೂರಿನಲ್ಲಿ 'ಗಾಂಧಿ ನಡಿಗೆ' ಕಾರ್ಯಕ್ರಮಕ್ಕೆ **ಮುಖ್ಯಮಂತ್ರಿ ಸಿದ್ದರಾಮಯ್ಯ** ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಚಾಲನೆ ನೀಡಲಿದ್ದಾರೆ.

*******

**ರಾಜ್ಯ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಮಹಾತ್ಮ ಗಾಂಧೀಜಿ** ಅವರ 155ನೇ ಜಯಂತಿ ಹಿನ್ನೆಲೆ, ವಿವಿಧ ಪ್ರತಿಷ್ಠಿತ ಪ್ರಶಸ್ತಿಗಳನ್ನು ಘೋಷಿಸಿದ್ದು, ಇಂದು ಬೆಂಗಳೂರಿನ ವಾರ್ತಾಸೌಧದ ಸುಲೋಚನಾ ಸಭಾಂಗಣದಲ್ಲಿ, ಮಧ್ಯಾಹ್ನ 3 ಗಂಟೆಗೆ, ಮುಖ್ಯಮಂತ್ರಿ ಸಿದ್ದರಾಮಯ್ಯ

ಸಾಧಕರಿಗೆ ಪುರಸ್ಕಾರಗಳನ್ನು ನೀಡಿ ಅಭಿನಂದಿಸಲಿದ್ದಾರೆ. ಹಾವೇರಿಯ ಹೊಸರಿತ್ತಿ ಶ್ರೀ ಗುದ್ಲೆಪ್ಪ ಹಳ್ಳಿಕೇರಿ ಸ್ಮಾರಕ ಪ್ರತಿ ಜ್ಞಾನದ ಗಾಂಧಿ ಗ್ರಾಮೀಣ ಗುರುಕುಲ ವಸತಿ ಶಾಲೆ, ಮಹಾತ್ಮ ಗಾಂಧಿ ಸೇವಾ ಪ್ರಶಸ್ತಿಗೆ ಭಾಜನವಾಗಿದೆ. ಗಾಂಧಿ ವಿಚಾರಧಾರೆಗಳ ಪ್ರವರ್ತಕ, 73 ವರ್ಷ ವಯಸ್ಸಿನ, ಗಾಂಧಿ ತತ್ವ ವ್ರತಧಾರಿ, ತುಮಕೂರಿನ ತುರುವೇಕೆರೆ ತಾಲೂಕು, ಗೊಟ್ಟಿಕೆರೆ ಗ್ರಾಮದ ಪ್ರೊಫೆಸರ್ ಜಿ.ಬಿ.ಶಿವರಾಜು, ಸಹ ಮಹಾತ್ಮ ಗಾಂಧಿ ಸೇವಾ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ ಪ್ರೊಫೆಸರ್ ಜಿ.ಬಿ.ಶಿವರಾಜು, ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

**ಧ್ವನಿ – ಪ್ರೊಫೆಸರ್ ಜಿ.ಬಿ. ಶಿವರಾಜು (41 ಸೆಕೆಂಡುಗಳು)**

*******

**ಟೀಯೆಸ್ಸಾರ್ ಸ್ಮಾರಕ ಪತ್ರಿಕೋದ್ಯಮ ಪ್ರಶಸ್ತಿಗೆ, ನಾಡಿನ ಹೆಸರಾಂತ** ಪತ್ರಕರ್ತರುಗಳಾದ ಶಿವಾಜಿ ಗಣೇಶನ್, ಶ್ರೀಕಾಂತಾಚಾರ್ಯ ಮಣೂರ, ಡಾಕ್ಟರ್ ಆರ್.ಪೂರ್ಣಿಮಾ, ಡಾಕ್ಟರ್ ಪದ್ಮರಾಜ ದಂಡಾವತಿ, ಡಾಕ್ಟರ್ ಸರಜೂ ಕಾಟ್ಕರ್ ಭಾಜನರಾಗಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ ಹಿರಿಯ ಪತ್ರಕರ್ತ ಬೆಳಗಾವಿಯ ಡಾಕ್ಟರ್ ಸರಜೂ ಕಾಟ್ಕರ್ ತಮ್ಮ ಸಂತಸ ಹಂಚಿಕೊಂಡಿದ್ದಾರೆ.

**ಧ್ವನಿ – ಡಾಕ್ಟರ್ ಸರಜೂ ಕಾಟ್ಕರ್ (45 ಸೆಕೆಂದುಗಳು)**

ಮೊಹರೆ ಹಣಮಂತರಾಯ ಪತ್ರಿಕೋದ್ಯಮ ಪ್ರಶಸ್ತಿಗೆ ಹಿರಿಯ ಸಂಪಾದಕರುಗಳಾದ ರಾಜೀವ್ ಕಿದಿಯೂರ, ಇಂದೂಧರ ಹೊನ್ನಾಪುರ, ಎನ್.ಮಂಜುನಾಥ, ಚಂದ್ರಶೇಖರ್ ಪಾಲೆತ್ತಾಡಿ ಹಾಗೂ ಶಿವಲಿಂಗಪ್ಪ ದೊಡ್ಡಮನಿ ಭಾಜನರಾಗಿದ್ದಾರೆ. ರಾಜ್ಯಮಟ್ಟದ ಬಾಪೂಜಿ ಪ್ರಬಂಧ ಸ್ಪರ್ಧೆ ವಿಜೇತರಿಗೆ ಇದೇ ಸಂದರ್ಭದಲ್ಲಿ ಗಣ್ಯರು ಬಹುಮಾನಗಳನ್ನು ನೀಡಿ ಗೌರವಿಸಲಿದ್ದಾರೆ.

*******

**ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ.**

*******

**ರಾಜ್ಯದ ಸುಮಾರು 50** ಲಕ್ಷಕ್ಕೂ ಹೆಚ್ಚು ಹಿರಿಯ ನಾಗರಿಕರಿಗೆ ಸರ್ಕಾರ ಮಾಸಾಶನವನ್ನು ನೀಡುತಿದ್ದು, ಮುಂಬರುವ ದಿನಗಳಲ್ಲಿ ಮಾಸಾಶನದ ಮೊತ್ತವನ್ನು ಹೆಚ್ಚಿಸಲು ಕ್ರಮವಹಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ. ಬೆಂಗಳೂರಿನಲ್ಲಿ ನಿನ್ನೆ ಹಮ್ಮಿಕೊಳ್ಳಲಾದ ವಿಶ್ವ ಹಿರಿಯ ನಾಗರಿಕರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಈ ವರ್ಷ ವಿಶ್ವ ಸಂಸ್ಥೆಯು ತನ್ನ ಘೋಷ ವಾಕ್ಯ "ಘನತೆಯ ಬಾಳಿನೊಂದಿಗೆ ವಯೋಪಕ್ವತೆ : ವಿಶ್ವದಾದ್ಯಂತ ಹಿರಿಯ ಜೀವಿಗಳಿಗೆ ಆರೈಕೆ ಮತ್ತು ಬೆಂಬಲ ವ್ಯವಸ್ಥೆಗಳನ್ನು ಸದೃಢಗೊಳಿಸುವುದರ ಮಹತ್ವ" ಎಂಬುದಾಗಿದೆ ಎಂದರು.

*******

**'ಸಹಬಾಳ್ವೆಯೊಂದಿಗೆ ವನ್ಯಜೀವಿಗಳ ಸಂರಕ್ಷಣೆ' ಧ್ಯೇಯದಡಿ ಇಂದಿನಿಂದ 8ನೇ** ತಾರೀಖಿನವರೆಗೆ, 70ನೇ ವನ್ಯಜೀವಿ ಸಪ್ತಾಹವನ್ನು ರಾಜ್ಯ ಅರಣ್ಯ ಇಲಾಖೆಯ ವನ್ಯಜೀವಿ ಸಂರಕ್ಷಣಾ ವಿಭಾಗ ಆಯೋಜಿಸಿದೆ. ವನ್ಯಜೀವಿ ಸಪ್ತಾಹವನ್ನು 1952 ರಲ್ಲಿ ಅಳಿವಿನಂಚಿನಲ್ಲಿರುವ ಮತ್ತು ಅಪಾಯದಲ್ಲಿರುವ ವನ್ಯ ಪ್ರಾಣಿಗಳನ್ನು ರಕ್ಷಿಸುವ ದೀರ್ಘಾವಧಿ ಗುರಿಯೊಂದಿಗೆ ಆರಂಭಿಸಲಾಯಿತು. ಅಕ್ಟೋಬರ್ ತಿಂಗಳ ಮೊದಲ ವಾರ, ಅರಣ್ಯ ಮತ್ತು ವನ್ಯ ಪ್ರಾಣಿಗಳನ್ನು ಸಂರಕ್ಷಿಸಲು, ಸಮುದಾಯದ ಸಹಭಾಗಿತ್ವವನ್ನು ಪ್ರೇರೇಪಿಸುವ ಹಾಗೂ ಜನಜಾಗ್ರತಿ ಮೂಡಿಸುವ ಗುರಿ ಹೊಂದಿದೆ. ಕೇಂದ್ರ ಸರ್ಕಾರ ಭಾರತೀಯ ವನ್ಯಜೀವಿ ಮಂಡಳಿಯನ್ನು ಸ್ಥಾಪಿಸಿದ್ದು, ಯುವ ಜನತೆ ಸ್ಥಳೀಯವಾಗಿ ವನ್ಯಜೀವಿಗಳನ್ನು ಹಾಗೂ ಅವುಗಳ ಆವಾಸ ಸ್ಥಾನಗಳನ್ನು ಸಂರಕ್ಷಿಸಲು ಸ್ವಯಂಪ್ರೇರಣೆಯಿಂದ, ಕಾರ್ಯನಿರ್ವಹಿಸಲು ತರಬೇತಿ ನೀಡುತ್ತಾ ಬಂದಿವೆ. ಇಂದು ಬೆಳಗ್ಗೆ ಬೆಂಗಳೂರಿನ ಕಬ್ಬನ್ ಪಾರ್ಕ್‌ನಲ್ಲಿ ವನ್ಯಜೀವಿ ಜಾಗ್ರತಿ ನಡಿಗೆ ಕಾರ್ಯಕ್ರಮ ಆಯೋಜಿಸಲಾಗಿದೆ.

*******

**ಕೃಷಿಗೆ ತಾಂತ್ರಿಕ, ವೈಜ್ಞಾನಿಕ ನೆರವನ್ನು ಒದಗಿಸಲು ರಾಜ್ಯ ಸರ್ಕಾರ ಆದ್ಯತೆ** ನೀಡುತ್ತಿದ್ದು, ಕೃಷಿ ಪದವೀಧರರು ಸ್ವಯಂ ಉದ್ಯೋಗದ ಮೂಲಕ ಉದ್ಯೋಗ ಸೃಷ್ಟಿಸಬೇಕು ಎಂದು ಕೃಷಿ ಖಾತೆ ಸಚಿವ ಎನ್.ಚಲುವರಾಯಸ್ವಾಮಿ ಹೇಳಿದ್ದಾರೆ. ಬೆಂಗಳೂರು ಗಾಂಧಿ ಕೃಷಿ ವಿಶ್ವವಿದ್ಯಾಲಯದ 59ನೇ ಸಂಸ್ಥಾಪನಾ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ಕೃಷಿ ಕ್ಷೇತ್ರದ ಸುದೃಢತೆಯಿಂದ ದೇಶದ ಸುಸ್ಥಿರ ಅಭಿವೃದ್ಧಿ ಸಾಧ್ಯವಾಗಲಿದೆ. ಹೊಸ ಸಂಶೋಧನೆಗಳು, ಸುಧಾರಿತ ತಳಿಗಳು ಯಂತ್ರೋಪಕರಣಗಳು ಸುಲಭವಾಗಿ ರೈತರಿಗೆ ತಲುಪಬೇಕು. ಕೃಷಿ ಪೂರಕ ಚಟುವಟಿಕೆಗಳಿಗೆ ಬಲ ತುಂಬುವ ಅಗತ್ಯವಿದೆ ಎಂದರು.

*******

**ಧಾರವಾಡದ ಆಕಾಶವಾಣಿಯಲ್ಲಿ** ಸ್ವಚ್ಛತಾ ಅಭಿಯಾನ ಹಮ್ಮಿಕೊಳ್ಳಲಾಗಿತ್ತು. ಕಸ ತ್ಯಾಜ್ಯ ಸಂಗ್ರಹ ಹಾಗೂ ವಿಲೇವಾರಿಯಲ್ಲಿ ಸಂಸ್ಥೆಯ ಅಧಿಕಾರಿಗಳು ಹಾಗೂ ಸಿಬ್ಬಂದಿ ಸೇರಿದಂತೆ ಧಾರವಾಡದ ಕರ್ನಾಟಕ ಕಾಲೇಜಿನ ಎನ್.ಎಸ್.ಎಸ್ ಸ್ವಯಂ ಸೇವಕರು ಸ್ವಚ್ಛತಾ ಕಾರ್ಯದಲ್ಲಿ ಪಾಲ್ಗೊಂಡಿದ್ದರು.ಈ ಸಂದರ್ಭದಲ್ಲಿ ಸಸಿಗಳನ್ನು ನೆಡಲಾಯಿತು. ಪರಿಸರ ತಜ್ಞ ಶಂಕರ ಕುಂಬಿ, ನಿಲಯದ ಕಾರ್ಯಕ್ರಮ ಮುಖ್ಯಸ್ಥರಾದ ಶರಣ ಬಸವ ಚೋಳಿನ, ಅಭಿಯಂತರ ವಿಭಾಗದ ಉಪ ನಿರ್ದೇಶಕರಾದ ಅರುಣ ಪ್ರಭಾಕರ ಭಾಗವಹಿಸಿದ್ದರು.

*******

**ರೈತರ ಉತ್ಪನ್ನಗಳಿಗೆ ನಿರ್ದಿ ್ಟ ಬೆಲೆ ನಿಗದಿಪಡಿಸಲು** ಪ್ರತಿ ಪಂಚಾಯತಿಗೊಂದು ರೈತ ಉತ್ಪಾದನಾ ಸಂಸ್ಥೆ – ಎಫ್.ಪಿ.ಒ ಸ್ಥಾಪಿಸಬೇಕು. ರೈತರು ತಮ್ಮ ಉತ್ಪನ್ನಗಳಿಗೆ ಬ್ರ್ಯಾಂಡ್ ಮಾಡಿ ಮಾರಾಟದ ಮೂಲಕ ಲಾಭ ಗಳಿಸಬೇಕು ಎಂದು ವಿಧಾನ ಪರಿ ತ್ ಸದಸ್ಯ ಎಂ.ಎಲ್.ಅನಿಲ್ ಕುಮಾರ್ ತಿಳಿಸಿದ್ದಾರೆ. ಕೋಲಾರ ತಾಲ್ಲೂಕಿನ ಮುದುವತ್ತಿ ಗ್ರಾಮದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಎಫ್.ಪಿ.ಒ ಒಂದು ಮಹತ್ವದ ಯೋಜನೆಯಾಗಿದೆ. ರೈತರು ಸ್ವಾವಲಂಬಿಗಳಾಗಬೇಕು ಎಂಬ ಉದ್ದೇಶದಿಂದ ವಿವಿಧ ಇಲಾಖೆಗಳಲ್ಲಿ ಈ ಯೋಜನೆಯನ್ನು ಕೇಂದ್ರ ಸರ್ಕಾರ ಜಾರಿಗೆ ತಂದಿದೆ ಎಂದರು.

*******

## ಈಗ ಸಂಕ್ಷಿಪ್ತ ಸುದ್ದಿಗಳು

**ಚಿಕ್ಕಬಳ್ಳಾಪುರ ಜಿಲ್ಲಾ ಕೇಂದ್ರದಲ್ಲಿ** 3 ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಿಸಿರುವ ಗಾಂಧಿ ಭವನವನ್ನು ಇಂದು ಉನ್ನತ ಶಿಕ್ಷಣ ಖಾತೆ ಸಚಿವ ಡಾಕ್ಟರ್ ಎಂ.ಸಿ.ಸುಧಾಕರ್ ಲೋಕಾರ್ಪಣೆ ಮಾಡಲಿದ್ದಾರೆ.

*******

**ಸ್ವಾತಂತ್ರ್ಯ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದ ಗಾಂಧಿವಾದಿ ಗುದ್ಲೆಪ್ಪ ಹಳ್ಳಿಕೇರಿ** ಅವರ ಜೀವನ ಚರಿತ್ರೆಯನ್ನು ಯುವ ಪೀಳಿಗೆಗೆ ಪರಿಚಯಿಸುವ ಉದ್ದೇಶದಿಂದ ಹಾವೇರಿ ತಾಲ್ಲೂಕಿನ ಹೊಸರಿತ್ತಿಯಲ್ಲಿರುವ ಗಾಂಧಿ ಗ್ರಾಮೀಣ ಗುರುಕುಲ ವಸತಿ ಶಾಲೆಯಲ್ಲಿ ನಿರ್ಮಿಸಲಾದ ಫೋಟೊ ಗ್ಯಾಲರಿಯನ್ನು ಇಂದು ಉದ್ಘಾಟಿಸಲಾಗುವುದು.

*******

**ಬಳ್ಳಾರಿ** ನಗರದ ಡಾಕ್ಟರ್ ಜೋಳದರಾಶಿ ದೊಡ್ಡನಗೌಡ ರಂಗಮಂದಿರದಲ್ಲಿ ಹಿರಿಯ ನಾಗರಿಕರ ದಿನಾಚರಣೆ ಹಮ್ಮಿಕೊಳ್ಳಲಾಗಿತ್ತು.

*******

**ಪ್ರಧಾನಮಂತ್ರಿ ಜನ್ ಜಾತಿಯ ಉನ್ನತ್ ಗ್ರಾಮ ಅಭಿಯಾನ** ಕಾರ್ಯಕ್ರಮದಡಿ ಯಾದಗಿರಿ ಜಿಲ್ಲೆಯ ಒಟ್ಟು 64 ಗ್ರಾಮಗಳು ಆಯ್ಕೆಯಾಗಿವೆ ಎಂದು ಯಾದಗಿರಿ ಜಿಲ್ಲಾಧಿಕಾರಿ ಡಾಕ್ಟರ್ ಬಿ.ಸುಶೀಲಾ ತಿಳಿಸಿದ್ದಾರೆ.

*******